**1 ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು**

**ಸ್ಪೆಷಲ್ ಮೊಕದ್ದಮೆ ನಂಃ 59/2023**

| | | |
|---|---|---|
| ಸಾಕ್ಷಿದಾರರ ಹೆಸರು | - ರೇಖಾ | ಪಿಡಬ್ಲ್ಯೂ- 05 |
| ಗಂಡನ ಹೆಸರು | - ನಾರಾಯಣ | ಸಿಡಬ್ಲ್ಯೂ -07 |
| ವಯಸ್ಸು | - 30 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ನಂದಿ ಗ್ರಾಮ | |

ದಿನಾಂಕಃ 23-02-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು. ಫ್ರಾಸಾ.1 ಮತ್ತು 2 ಗೊತ್ತು. ಫ್ರಾಸಾ.3 ನನ್ನ ತಾಯಿ.

2. ಆರೋಪಿಯಿಂದ ಫ್ರಾಸಾ.2 ರವರಿಗೆ ಏನು ತೊಂದರೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

3. ದಿಃ 08-01-2023 ರಂದು ಸಂಜೆ 5.45 ಗಂಟೆಗೆ ನಾನು ನಮ್ಮ ಜಮೀನಿನಿಂದ ಕೆಲಸ ಮುಗಿಸಿಕೊಂಡು ಮನೆಗೆ ಬರುತ್ತಿರುವಾಗ

ಫ್ರಾಸಾ.2 ರವರು ಮಿಟಲಿ ಮರದ ಕೆಳಗೆ ಬಿದ್ದಿದ್ದು ನೋವು, ನೋವು ಎಂದು ನರಳುತ್ತಿದ್ದರು ಎಂದರೆ ಸರಿಯಲ್ಲ. ಆಗ ನಾನು ಊರಿಗೆ ಬಂದು ಕೆಲಸ ಮುಗಿಸಿಕೊಂಡು ಬರುತ್ತಿದ್ದ ಫ್ರಾಸಾ.1 ರವರಿಗೆ ಸಂಜೆ 6 ಗಂಟೆ ಸಮಯದಲ್ಲಿ ನಿಮ್ಮ ಅಪ್ಪ ಹನುಮಂತಪ್ಪರವರ ಜಮೀನಿನಲ್ಲಿರುವ ಮಿಟಲಿ ಮರದಡಿ ಬಿದಿದ್ದು, ನೋವು ನೋವು ಎಂದು ನರಳುತ್ತಿದ್ದಾರೆ ಎಂದು ತಿಳಿಸಿದೆನು ಎಂದರೆ ಸರಿಯಲ್ಲ. ಫ್ರಾಸಾ.1 ರವರು ಕೂಡಲೇ ಅವರ ಬೈಕಿನಲ್ಲಿ ಅವರ ಅಣ್ಣನ ಮಗನಾದ ಚಾಸಾ.8 ರವರನ್ನು ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಸ್ವಲ್ಪ ಸಮಯದ ನಂತರ ಫ್ರಾಸಾ.1 ಮತ್ತು ಚಾಸಾ.8 ರವರು ಫ್ರಾಸಾ.2 ರವರನ್ನು ಬೈಕಿನಲ್ಲಿ ಕೂಡಿಸಿಕೊಂಡು ಅವರ ಮನೆಗೆ ಕರೆದುಕೊಂಡು ಬಂದರು ಎಂದರೆ ಸರಿಯಲ್ಲ. ನಂತರ ನಾನು ಗಲಾಟೆಯಾದ ಬಗ್ಗೆ ವಿಚಾರ ಮಾಡಿದಾಗ ತಿಳಿಯಲಾಗಿ, ಎಮ್ಮೆ ಮೇಯಿಸುವ ಸರದಿ ಪೂಜಾರಿ ಚಂದ್ರಪ್ಪರವರಿಗೆ ಇದ್ದು ಅವರ ಪರವಾಗಿ ಫ್ರಾಸಾ.2 ರವರು ಎಮ್ಮೆ ಮೇಯಿಸಲು ಸಿದ್ದರ ಓಣಿ ಹತ್ತಿರ ಹೋದಾಗ ಅವರಿಗೆ ಬಾಯಾರಿಕೆ ಆಗಿದ್ದರಿಂದ ಎಮ್ಮೆಗಳನ್ನು ಬಿಟ್ಟು ಮಧ್ಯಾಹ್ನ 12 ಗಂಟೆ ಸುಮಾರಿಗೆ ಮಿಟಲಿ ಮರದಡಿಯಲ್ಲಿ ನೀರು ಕುಡಿಯುತ್ತಿದ್ದಾಗ 1 ನೇ ಆರೋಪಿಯಾದ ಅರುಣಕುಮಾರ ಅಲ್ಲಿಗೆ ಹೋಗಿ ಏಕಾಏಕಿ ದೊಣ್ಣೆಯಿಂದ ಫ್ರಾಸಾ.2 ರವರ ಎಡಗಾಲು, ಎಡಗೈ ಮತ್ತು ಸೊಂಟಕ್ಕೆ ಬಲವಾಗಿ ಹೊಡೆದು ಅವಾಚ್ಯ ಶಬ್ದಗಳಿಂದ ಬೈದಿದ್ದಾಗಿ, ಆಗ ಫ್ರಾಸಾ.2 ರವರು ಯಾಕಪ್ಪ ಈ ರೀತಿ ಹೊಡೆಯುತ್ತೀರಾ ಎಂದು ಕೇಳಿದಾಗ, ಹೊಲೆಯ ಮಾದಿಗ ಸೂಳೆ ಮಗನೇ, ನಿನ್ನ ತಾಯಿನಾಡ ನಿನಗೆ ಜ್ಞಾನ ಇಲ್ಲವೇನೋ, ನಿನ್ನನ್ನು ಕೊಲೆ ಮಾಡುತ್ತೇನೆ ಮತ್ತು ನಿನ್ನ ಕುಟುಂಬದವರನ್ನು ಯಾರನ್ನು ಕೂಡ ಉಳಿಸುವುದಿಲ್ಲ ಎಂದು ಆರೋಪಿತರು ಹೇಳಿ, ದೊಣ್ಣೆಯನ್ನು

ಮರದಡಿ ಬಿಸಾಡಿ ಹೋಗಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ. ಸದರಿ ಗಲಾಟೆಯಾಗುವಾಗ ಪ್ರಾಸಾ.3 ಮತ್ತು 4 ರವರು ಸ್ಥಳದಲ್ಲಿ ಇದ್ದುದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ.

4. ದಿಃ 13-01-2023 ರಂದು ಪೊಲೀಸರು ನನ್ನನ್ನು ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ. ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ.9 ಎಂದು ಗುರುತಿಸಲಾಯಿತು.

5. ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ಪೊಲೀಸರಿಗೆ ನಿಪಿ.9 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಈಗ ಆರೋಪಿಯೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿಯ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ